ರಾಜ್ಯದಲ್ಲಿ ಮಕ್ಕಳನ್ನು ದತ್ತು ನೀಡಲು ಅರ್ಹತೆ ಹೊಂದಿರುವ ಸಂಸ್ಥೆಗಳು

1118 ಶ್ರೀ ನರೇಂದ್ರ ಬಾಬು ನೆ.ಲ. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಕ್ಕಳನ್ನು ದತ್ತು ನೀಡಲು ಅರ್ಹತೆ ಹೊಂದಿರುವ ಸಂಸ್ಥೆಗಳು ಎಷ್ಟು? (ದೇಶೀಯ/ವಿದೇಶೀಯ ದತ್ತು ಸಂಸ್ಥೆಗಳ ವಿವರ ನೀಡುವುದು)

ಆ) ಕಳೆದ 3 ವರ್ಷಗಳಲ್ಲಿ ಅನಧಿಕೃತವಾಗಿ ದತ್ತು ನೀಡಿರುವ ಬಗ್ಗೆ ತನಿಖೆಗೆ ಒಳಪಡಿಸಲಾಗಿರುವ ಪ್ರಕರಣಗಳೆಷ್ಟು?

ಇ) ಅಂತಹವರ ವಿರುದ್ಧ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು)

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ರಾಜ್ಯದಲ್ಲಿ ಸರ್ಕಾರದಿಂದ 25 ಸಂಸ್ಥೆಗಳಿಗೆ ದತ್ತು ಕಾರ್ಯಕ್ರಮ ನಡೆಸಲು ಪರವಾನಗಿ ನೀಡಲಾಗಿದೆ. ಇವುಗಳಲ್ಲಿ 7 ಸಂಸ್ಥೆಗಳು ಸ್ವದೇಶಿ ಹಾಗೂ ವಿದೇಶಿ ದತ್ತ ಕಾರ್ಯಕ್ರಮಗಳನ್ನು ನಡೆಸುತ್ತಿವೆ. ಉಳಿದ 18 ಸಂಸ್ಥೆಗಳು ಸ್ವದೇಶಿ ದತ್ತು ಕಾರ್ಯಕ್ರಮ ಮಾತ್ರ ನಡೆಸುತ್ತಿವೆ. (ಪಟ್ಟಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ).

ಆ) ಸಾರ್ವಜನಿಕ ಸ್ಥಳಗಳಲ್ಲಿ ದೊರೆಯುವ ಅನಾಥ, ತಿರಸ್ಕರಿಸಲ್ಪಟ್ಟ, ಪರಿತ್ಯಕ್ತ ಮಕ್ಕಳು ದೊರೆತಾಗ ಅಂತಹ ಮಕ್ಕಳನ್ನು ಸಾರ್ವಜನಿಕರು ರಕ್ಷಿಸಿ ಸಾಕುತ್ತಿದ್ದಲ್ಲಿ ಅಂತಹ ಮಕ್ಕಳನ್ನು ನಿಯಮಾನುಸಾರ ಮಕ್ಕಳ ಹಿತದೃಷ್ಟಿಯಿಂದ ಅಧಿಕೃತವಾಗಿ ದತ್ತು ಪಡೆಯಲು ತಿಳಿಸಿ ಸಕ್ರಮಗೊಳಿಸಲು ಮಕ್ಕಳ ಕಲ್ಯಾಣ ಸಮಿತಿಗೆ ತಿಳಿಸಲಾಗಿರುತ್ತದೆ. 5 ಇಂತಹ ಪ್ರಕರಣಗಳು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಈ ಪ್ರಕರಣಗಳ ಬಗ್ಗೆ ಮಕ್ಕಳ ಕಲ್ಯಾಣ ಸಮಿತಿಯು ನ್ಯಾಯಬದ್ಧವಾಗಿ ದತ್ತು ನೀಡಲು ಕ್ರಮ ಕೈಗೊಂಡಿರುತ್ತದೆ. ಆದುದರಿಂದ ತನಿಖೆ ನಡೆಸುವ ಅವಶ್ಯಕತೆ ಉದ್ಭವಿಸಿರುವುದಿಲ್ಲ.

ಅನುಬಂಧ

ಕಾರಾ, ನವದೆಹಲಿ ಇವರಿಂದ ಮಾನ್ಯತೆ ಪಡೆದ ಸ್ವದೇಶಿ ಮತ್ತು ವಿದೇಶಿ ದತ್ತು ಕಾರ್ಯಕ್ರಮ ನಡೆಸುವ ಸಂಸ್ಥೆಗಳು

ಕ್ರ. ಸಂ.	ಸಂಸ್ಥೆಗಳ ಹೆಸರು ಮತ್ತು ವಿಳಾಸ
1	ಕಾರ್ಯದರ್ಶಿಗಳು, ಆಶ್ರಯ ಚಿಲ್ಡ್ರನ್ಸ್ ಹೋಂ, ಜವಾನ್ಸ್ ಕ್ವಾರ್ಟರ್ಸ್, ಬಿಡಿಎ ಪಾರ್ಕ್, ಡಬ್ಬಲ್ ರೋಡ್, ಇಂದಿರಾ ನಗರ, 1 ನೇ ಹಂತ, ಬೆಂಗಳೂರು–560 038
2	ನಿರ್ದೇಶಕರು, ಮೆ.ಕೆನರಾ ಬ್ಯಾಂಕ್ ರಿಲೀಫ್ ಅಂಡ್ ವೆಲ್ ಫೇರ್ ಸೊಸೈಟಿ, 27ನೇ ಅಡ್ಡ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560 070
3	ಅಧೀಕ್ಷಕರು, ಪ್ರೀತಿ ನಿಲಯ, ಹೋಲಿ ಏಂಜೆಲ್ಸ್ ಕಾನ್ವೆಂಟ್ ಸೊಸೈಟಿ ಆಫ್ ಸಿಸ್ಟರ್ಸ್ ಆಫ್ ಚಾರಿಟಿ, ಸ್ನೇಹಾಲಯ ಸೋಷಿಯೋ ಮೆಡಿಕಲ್ ರಿಲೀಫ್ ಸೆಂಟರ್, ಸೋಲೂರು ಅಂಚೆ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ
4	ಕಾರ್ಯದರ್ಶಿಗಳು, ಸೇಂಟ್ ಮೈಕೇಲ್ಸ್ ಹೋಂ, 80 ಅಡಿ ರಸ್ತೆ, ಇಂದಿರಾ ನಗರ ಅಂಚೆ, ಬೆಂಗಳೂರು–560 038
5	ನಿರ್ದೇಶಕರು, ಶಿಶು ಮಂದಿರ, ಸಂಖ್ಯೆ 17/11, ಕೇಂಬ್ರಿಡ್ಜ್ ರೋಡ್, ಅಲಸೂರು, ಬೆಂಗಳೂರು–560 038
6	ಅಧೀಕ್ಷಕರು, ಸೊಸೈಟಿ ಆಫ್ ಸಿಸ್ಟರ್ಸ್ ಆಫ್ ಚಾರಿಟಿ, ಸೇಂಟ್ ಜೆರೋಸಾ ಕಾನ್ವೆಂಟ್, ನಿರ್ಮಲಾ ಸೋಷಿಯಲ್ ವೆಲ್‌ಫೇರ್ ಸೆಂಟರ್, ಬಾಲನಿಕೇತನ, ಉಲ್ಲಾಳ–574159, ದಕ್ಷಿಣ ಕನ್ನಡ ಜಿಲ್ಲೆ
7	ಕಾರ್ಯಕಾರಿ ನಿರ್ದೇಶಕರು, ವಾತ್ಸಲ್ಯ ಚಾರಿಟಬಲ್ ಟ್ರಸ್ಟ್, ಸಂಖ್ಯೆ 717, 5ನೇ ಅಡ್ಡರಸ್ತೆ, ಹೆಚ್‌ಆರ್‌ಬಿಆರ್ ಲೇಔಟ್, ಕಲ್ಯಾಣ ನಗರ, ಬೆಂಗಳೂರು–560 043

ಸ್ವದೇಶಿ ದತ್ತು ಕಾರ್ಯಕ್ರಮವನ್ನು ಮಾತ್ರ ನಡೆಸುವ ಅಧೀಕೃತ ಸಂಸ್ಥೆಗಳು	
1	ನಿರ್ದೇಶಕರು, ಅನಾಥ ಶಿಶು ನಿವಾಸ, ಸಂಖ್ಯೆ 245, ಬುಲ್ ಟೆಂಪಲ್ ರೋಡ್, ಎನ್.ಆರ್. ಕಾಲೋನಿ, ಬೆಂಗಳೂರು–560 019
2	ವ್ಯವಸ್ಥಾಪಕರು, ಬಾಪೂಜಿ ಚಿಲ್ಡ್ರನ್ಸ್ ಹೋಂ, ಸಂಖ್ಯೆ: 151/ಎಫ್, 4ನೇ ಅಡ್ಡರಸ್ತೆ, ಗೋಕುಲಂ 3ನೇ ಹಂತ, ಮೈಸೂರು–02
3	ಕಾರ್ಯದರ್ಶಿಗಳು, ಚೈತನ್ಯ ಚಿಲ್ಡ್ರನ್ಸ್ ಹೋಂ ನಂ. 46, ಅಭಿಜಿತ್ ಅಪಾರ್ಟ್‌ಮೆಂಟ್, 11ನೇ ಅಡ್ಡರಸ್ತೆ, 7ನೇ ಮೈನ್, ಮಲ್ಲೇಶ್ವರಂ, ಬೆಂಗಳೂರು–03
4	ಅಧೀಕ್ಷಕರು, ನಿರ್ಮಲ ಶಿಶುಭವನ, ಮಿಷಿನರೀಸ್ ಆಫ್ ಚಾರಿಟಿ, ಹೆಣ್ಣೂರು ಮುಖ್ಯ ರಸ್ತೆ, ಬೆಂಗಳೂರು–84
5	ಕಾರ್ಯದರ್ಶಿಗಳು, ಕಾಮಧೇನು ಸಹಕಾರಿ ವಿದ್ಯಾಶ್ರಮ ಚೈತನ್ಯ ಮಂದಿರ, ಗವೇನಹಳ್ಳಿ ಬೈಪಾಸ್ ರಸ್ತೆ, ಹಾಸನ–573 201
6	ಕಾರ್ಯದರ್ಶಿಗಳು, ಸ್ಫೂರ್ತಿರೂರಲ್ ಡೆವಲಪ್‌ಮೆಂಟ್ ಅಂಡ್ ಟ್ರೈನಿಂಗ್ ಸೊಸೈಟಿ, ಸ್ಫೂರ್ತಿಧಾಮ, ಬೇಳೂರು, ಕಡೂರು ಅಂಚೆ, ಕುಂದಾಪುರ ತಾಲ್ಲೂಕು–576 231, ಉಡುಪಿ ಜಿಲ್ಲೆ
7	ಕಾರ್ಯದರ್ಶಿಗಳು, ವನಿತಾ ಸಮಾಜ, ನಂ. 145, 2ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ–577 002
8	ಕಾರ್ಯದರ್ಶಿಗಳು, ಸ್ವಾಮಿ ವಿವೇಕಾನಂದ ಸೇವಾ ಪ್ರತಿಷ್ಠಾನ, ನ್ಯಾಯ ಮಾರ್ಗ, ಸುಭಾಷ್ ನಗರ, ಬೆಳಗಾವಿ–590 016
9	ವ್ಯವಸ್ಥಾಪಕರು, ಶ್ರೀ ಕೃಷ್ಣ ಚಾರಿಟಬಲ್ ಟ್ರಸ್ಟ್, ಸಂಖ್ಯೆ 4/156, ಅಂಬಲಪಾಡಿ ರಾಮಮಂದಿರದ ಹತ್ತಿರ, ಉಡುಪಿ ಜಿಲ್ಲೆ
10	ಕಾರ್ಯದರ್ಶಿಗಳು, ಸರ್ವೋದಯ ಸಮಾಜ ಸೇವಾ ಸಂಸ್ಥೆ, ಕದ್ರಿಮಿದ್ರಿ, ಅಂಬಳೆ ಹೋಬಳಿ, ಮಳಲೂರು ಅಂಚೆ, ಚಿಕ್ಕಮಗಳೂರು–577 133
11	ಕಾರ್ಯದರ್ಶಿಗಳು, ಜೀವನಜ್ಯೋತಿ ಟ್ರಸ್ಟ್, ಶ್ರೀ ಮಹದೇಶ್ವರ ಕಾಲೇಜ್ ರೋಡ್, ಅಂಚೆ ಪೆಟ್ಟಿಗೆ ಸಂಖ್ಯೆ: 20 ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ

12	ಕಾರ್ಯದರ್ಶಿಗಳು, ಶ್ರೀ ವಿದ್ಯಾ ಭಾರತಿ ಎಜುಕೇಶನ್ ಟ್ರಸ್ಟ್, ಮಹಿಳಾ ಸಮಾಜ ಕಟ್ಟಡ, ಸಿಟಿ ಮುನಿಸಿಪಲ್ ಕಛೇರಿ ಹತ್ತಿರ, ಶಿವಮೊಗ್ಗ–577201
13	ಕಾರ್ಯದರ್ಶಿಗಳು, ಸೇವಾ ಭಾರತಿ ಟ್ರಸ್ಟ್, ರಾಜಪೂತ್ ರಸ್ತೆ, ಬೆಟಗೇರಿ, ಗದಗ್–582 102
14	ಕಾರ್ಯದರ್ಶಿಗಳು, ಪರಸ್ಪರ ಟ್ರಸ್ಟ್, ಕೇರಾಫ್ ನಂಜುಂಡಯ್ಯ, ರೈಲ್ವೆ ಗೊಲ್ಲಹಳ್ಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು (ಗ್ರಾ) ಜಿಲ್ಲೆ
15	ಕಾರ್ಯದರ್ಶಿಗಳು, ಸ್ಪಂದನ ಅಸೋಸಿಯೇಷನ್, ಚಾಮುಂಡೇಶ್ವರಿ ಕಾಲೋನಿ, ಬಸ್ ನಿಲ್ದಾಣದ ಹತ್ತಿರ, ಬಂಕಾಪುರ, ಶಿಗ್ಗಾಂವ್ ತಾಲ್ಲೂಕು, ಹಾವೇರಿ ಜಿಲ್ಲೆ
16	ಅಧೀಕ್ಷಕರು, ಶಿಶುಗೃಹ, ಶಿಶುಮಂದಿರ, ಸುಧಾರಣಾ ಸಂಸ್ಥೆಗಳ ಸಂಕೀರ್ಣ, ಕಿದ್ವಾಯಿ ಆಸ್ಪತ್ರೆ ಹತ್ತಿರ, ಹೊಸೂರು ರಸ್ತೆ, ಬೆಂಗಳೂರು–29
17	ಅಧೀಕ್ಷಕರು, ಶಿಶುಗೃಹ, ಬಾಲಕಿಯರ ಬಾಲ ಮಂದಿರ, ಘಂಟಿಕೇರಿ, ಕ್ರಿಶ್ಚಿಯನ್ ಕಾಲೋನಿ, 3ನೇ ಅಡ್ಡರಸ್ತೆ, ಬೊಂಡಿಗೆರೆ ಪೊಲೀಸ್ ಸ್ಟೇಷನ್ ಹತ್ತಿರ, ಹುಬ್ಬಳ್ಳಿ–580020, ಧಾರವಾಡ ಜಿಲ್ಲೆ
18	ಅಧೀಕ್ಷಕರು, ಶಿಶುಗೃಹ, ಬಾಲಕಿಯರ ಬಾಲ ಮಂದಿರ, ಕೇರಾಫ್ ರಾಜ್ಯ ಮಹಿಳಾ ನಿಲ್, ಹಳೇ ಜೈಲು, ಆಳಂದ ರೋಡ್, ಗುಲ್ಬರ್ಗಾ–585101

ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ಇವತ್ತು ಸರ್ಕಾರ ಉತ್ತರವನ್ನು ಒದಗಿಸಿದೆ. ಸ್ವದೇಶಿ ಮತ್ತು ವಿದೇಶಿ ದತ್ತು ಸಂಸ್ಥೆಗಳು ಸರ್ಕಾರದಿಂದ ಮಾನ್ಯತೆ ಪಡೆದಿರುವಂಥ ಸಂಸ್ಥೆಗಳ ಪಟ್ಟಿಯನ್ನು ಕೊಟ್ಟಿದ್ದೀರಿ. ನಾನು ತಮ್ಮಲ್ಲಿ ಕೇಳಬಯಸುವುದೇನೆಂದರೆ ಕಳೆದ ವರ್ಷ 2007–08ರಲ್ಲಿ ಸ್ವದೇಶದಲ್ಲಿ ಮತ್ತು ವಿದೇಶದಲ್ಲಿ ಎಷ್ಟು ಮಕ್ಕಳನ್ನು adopt ಮಾಡಲಾಗಿದೆ. ಹಿಂದೆ ಕೇಂದ್ರ ಸರ್ಕಾರ ಮತ್ತು ನಮ್ಮ ದೇಶ ಬದ್ಧತೆ ಮಾಡಿರುವ ಹಾಗೆ Every child had a right to grow up in a family ಎನ್ನುವಂಥಾದ್ದನ್ನು ನಾನು ಹೇಳಿದ್ದೇನೆ. ಇವತ್ತು ನಾನು ತಮ್ಮಲ್ಲಿ ಕೇಳುವುದೇನೆಂದರೆ, ಇವತ್ತು ನಮ್ಮ

ದೇಶದಲ್ಲಿ Adoption ಎನ್ನುವಂಥಾದ್ದಕ್ಕೆ ಬಹಳ ಬೇಡಿಕೆಯಿದೆ. ನಮ್ಮ ದೇಶದಲ್ಲಿ ಬಹಳ ಬೇಡಿಕೆಯಿದೆ ಎಂದು ಹೇಳಿದರೆ, ಇವತ್ತು ಏಕೆ ಜನರು illegal adoptionಗೆ ಹೋಗುತ್ತೇರೆಂದರೆ ಬಹುಶಃ ನಮ್ಮ ದೇಶದಲ್ಲಿ adoptionಗೆ ಅವಕಾಶ ಇದ್ದರೂ ಸಹ ನಮ್ಮ ದೇಶದ ಬೇಡಿಕೆಗಳನ್ನು ಪೂರೈಸುವ ದಿಕ್ಕಿನಲ್ಲಿ ಈ ಸಂಸ್ಥೆಗಳು ಅಥವಾ ಬೇಕಾಗಿರತಕ್ಕಂತಹ ಏಜೆನ್ಸಿಗಳು ಏನಿವೆ ಅಥವಾ ಈ ಒಂದು ಸ್ವಯಂ ಸೇವಾ ಸಂಸ್ಥೆಗಳಲ್ಲಿ ಸಾಕಷ್ಟು ಸಿಗುತ್ತಾ ಇಲ್ಲ ಎನ್ನುವಂಥ ದೂರಿದೆ. ಈ ಸಂದರ್ಭದಲ್ಲಿ ಮಾನ್ಯ ಸಚಿವರಿಗೆ ನಾನು ಹೇಳುವುದೇನೆಂದರೆ, adoption ಅಂದರೆ ಕೇವಲ ಮಕ್ಕಳು ಇಲ್ಲದವರಿಗೆ ಮಕ್ಕಳನ್ನು ಕೊಡಕ್ಕಂಥಾದ್ದಲ್ಲ. ಅಪ್ಪ-ಅಮ್ಮ ಇಲ್ಲದ ಮಕ್ಕಳಿಗೆ ತಂದೆ ತಾಯಿಗಳನ್ನು ಕೊಡತಕ್ಕಂಥಾದ್ದು ಬಹಳ ಮುಖ್ಯ. ಮೇಲ್ನೋಟಕ್ಕೆ ಎರಡಕ್ಕೂ ಒಂದೇ ಅರ್ಥವಿದ್ದರೂ ಸಹ, ಆ ಮಕ್ಕಳನ್ನು ದತ್ತು ತೆಗೆದುಕೊಂಡವರಿಗೆ legal sancitity ಯನ್ನು ಕೊಡಬೇಕು. ನಮ್ಮ ದೇಶದಲ್ಲಿರುವ Hindu Adoption and Maintenance Act, 1956 ಆಧಾರದ ಮೇಲೆ ದತ್ತು ತೆಗೆದುಕೊಳ್ಳತಕ್ಕಂಥಾದ್ದು ಆಗುತ್ತಿದೆ. ಅಂದರೆ ದೇಶೀಯ, ಹಿಂದೂ family ಗಳಿಗೆ ದತ್ತು ತೆಗೆದುಕೊಳ್ಳತಕ್ಕಂಥಾದ್ದು ಈ ಒಂದು ಆಧಾರದ ಮೇಲೆ ಮಾತ್ರ. ವಿದೇಶದಿಂದ ಪಡೆಯತಕ್ಕಂಥ ಮಕ್ಕಳಿಗೆ, Guardians and Wards Act, 1890 ಅನ್ವಯವಾಗುತ್ತಿದೆ. ನಮ್ಮ ದೇಶದಲ್ಲಿ ಈ ಒಂದು Act ಅನ್ನು amend ಮಾಡದೇ ಇದ್ದರೆ...

ಅಧ್ಯಕ್ಷರು: ಇದು ಪ್ರಶ್ನೋತ್ತರ. ನಿಮ್ಮ ಸಮಸ್ಯೆ ಏನೆಂದು ಹೇಳಿ. Specific ಆಗಿ ನಿಮಗೆ ಏನಾಗಬೇಕೆಂದು ಹೇಳಿ. Guardians and Wards Act ಅನ್ನು ಉಲ್ಲೇಖಿಸಿದಿರಿ, ಸರಿ. ಆದರೆ ಆ Act ಪ್ರಕಾರ ಏನಾಗಬೇಕಾಗಿದೆ ಎಂದು ಹೇಳಿ. ಸರ್ಕಾರ ಏನು ಕ್ರಮ ಕೈಗೊಳ್ಳಬೇಕು ಎಂದು ನೀವು suggestion ಮಾಡಿ.

ಶ್ರೀ ನೆ.ಲ. ನರೇಂದ್ರಬಾಬು: ನಮ್ಮ ದೇಶದಿಂದ ಹೊರಗಡೆ ಹೋಗತಕ್ಕಂಥ ಮಕ್ಕಳಿಗೆ ಅಗತ್ಯವಿರುವಂಥ ಕಾನೂನಿನ parental hood sanctity ಬರಬೇಕು ಎಂದರೆ ಈ Act amendment ಆಗಬೇಕಾಗಿದೆ. ಇವತ್ತು ನಮ್ಮಲ್ಲಿ ದತ್ತು ತೆಗೆದುಕೊಳ್ಳಲು, Hindu Adoption and Maintenance Act, 1956 ಮಾತ್ರ ಇರತಕ್ಕಂಥಾದ್ದು, ವಿದೇಶಗಳಿಗೆ ದತ್ತು ಕೊಡತಕ್ಕಂಥ ಮಕ್ಕಳಿಗೆ Guardians and Wards Act, 1890 ಇದೆ. Amendment ಅನ್ನು ಮಾಡದೇ

ಹೋದರೆ, ಇಲ್ಲಿಂದ ಹೋಗತಕ್ಕಂಥ ಮಕ್ಕಳಿಗೆ ಪೋಷಕರ ಕಾನೂನಿನ sanctity ಸಿಗುವುದಿಲ್ಲ.

ಅಧ್ಯಕ್ಷರು: ಆ Act ಗಳಿಗೆ amendment ಕೇಂದ್ರ ಸರ್ಕಾರ ಮಾಡಬೇಕಾಗುತ್ತದೆ.

ಶ್ರೀ ಸಿ.ಟಿ. ನರೇಂದ್ರಬಾಬು: ಅದಕ್ಕೆ ನಿಮ್ಮಿಂದ proposal ಹೋಗಬೇಕಲ್ಲವೇ?

ಅಧ್ಯಕ್ಷರು: ಇಲ್ಲಿ ನಮ್ಮ ರಾಜ್ಯ ಸರ್ಕಾರ ಇದಕ್ಕೆ ಏನು ಮಾಡಬೇಕು ಎನ್ನುವುದನ್ನು ಹೇಳಿ.

ಶ್ರೀ ಸಿ.ಟಿ. ನರೇಂದ್ರಬಾಬು: ನಾನು ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ರಾಜ್ಯದಲ್ಲಿ adoption centreಗಳನ್ನು increase ಮಾಡಲು ರಾಜ್ಯ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ? ಈ ರೀತಿಯ adoption centre ಬೆಂಗಳೂರಿನಲ್ಲಿ ಒಂದು ಕಡೆ ಮಾತ್ರ ಇದೆ. ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದಾಗ ಈ ರೀತಿಯ ಕೇಂದ್ರಗಳು ನಮ್ಮ ರಾಜ್ಯದಲ್ಲಿ ಕಡಿಮೆ ಇವೆ. ಉತ್ತರ ಕರ್ನಾಟಕದಲ್ಲಾಗಲೀ ಅಥವಾ ರಾಜ್ಯ ಬೇರೆ ಬೇರೆ ಭಾಗಗಳಲ್ಲಾಗಲೀ ಇಲ್ಲ. ಇದರ ಬಗ್ಗೆ ರಾಜ್ಯ ಸರ್ಕಾರ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತದೆಯೇ? ತನ್ಮೂಲಕ ಅನಾಥ ಮಕ್ಕಳನ್ನು illegal ಆಗಿ ದತ್ತು ಪಡೆಯುತ್ತಿರತಕ್ಕಂಥಾದ್ದು ನಿಲ್ಲಲಿಕ್ಕೆ ಸಾಧ್ಯವಾಗುತ್ತದೆ, ಒಂದು general awareness ತರಲಿಕ್ಕೆ ಸಾಧ್ಯವಾಗುತ್ತದೆ. ರಾಜ್ಯ ಸರ್ಕಾರ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಿಕ್ಕೆ ಸಿದ್ಧವಾಗಿದೆ ಎನ್ನತಕ್ಕಂಥಾದ್ದಕ್ಕೆ ನನಗೆ ಉತ್ತರ ಕೊಡಬೇಕು.

ಶ್ರೀ ಶಿವರಾಜ್ ತಂಗಡಗಿ: ಮಾನ್ಯ ಸದಸ್ಯರು, ಮಕ್ಕಳನ್ನು ಸ್ವದೇಶಿ ಮತ್ತು ವಿದೇಶಿಗಳಿಗೆ ದತ್ತು ನೀಡಿರುವ ಬಗ್ಗೆ ಮಾಹಿತಿಯನ್ನು ಕೇಳಿದರು. 2001ರಲ್ಲಿ ಸ್ವದೇಶಿ ದತ್ತು ಪಡೆದಂಥ ಮಕ್ಕಳು 195, ವಿದೇಶಿ ದತ್ತು ಪಡೆದಂಥ ಮಕ್ಕಳು 31, 2002ರಲ್ಲಿ 392 ಸ್ವದೇಶಿ ಇದ್ದರೆ ವಿದೇಶಿ 43, 2003-04ರಲ್ಲಿ ಸ್ವದೇಶಿ 201 ಇದ್ದರೆ, ವಿದೇಶಿ 41, ಅದೇ ರೀತಿ 2009ರವರೆಗೆ ಅಂಕಿ ಸಂಖ್ಯೆಗಳಿವೆ. 2008-09ರಲ್ಲಿ ಇದುವರೆಗೆ 330 ಮಕ್ಕಳನ್ನು ದತ್ತು ಪಡೆದಂಥಾದ್ದು ಇದೆ. ಇನ್ನು, ಕಾಯ್ದೆ ತಿದ್ದುಪಡಿಯ ಬಗ್ಗೆ ಸದಸ್ಯರು ಹೇಳಿದರು. ಜೆ.ಜೆ. ಕಾಯ್ದೆ, 2000 (The Juvinile Justice (care and protection of children) Act, 2000) ಮತ್ತು ಅದರ 2006ರ ತಿದ್ದುಪಡಿ ಅನ್ವಯ ಇಂಥ ಮಕ್ಕಳ ರಕ್ಷಣೆಗಾಗಿ,

ನಡೆಯುತ್ತಿರುವ ಎಲ್ಲ ಸಂಸ್ಥೆಗಳಿಗೆ ಸಂಬಂಧಿಸಿದ ಕಾನೂನನ್ನು ತಿದ್ದುಪಡಿ ಮಾಡಬೇಕೆನ್ನುವುದು ಈಗಾಗಲೇ ನಮ್ಮ ಸರ್ಕಾರದ ಗಮನದಲ್ಲಿದೆ, ಅದು ಪರಿಶೀಲನೆ ಹಂತದಲ್ಲಿದೆ. Adoption centre ಬೆಂಗಳೂರಿನಲ್ಲಿ ಮಾತ್ರ ಇದೆ, ಉತ್ತರ ಕರ್ನಾಟಕ ಅಥವಾ ಹೈದರಾಬಾದ್ ಕರ್ನಾಟಕದ ಭಾಗದಲ್ಲಿ ಇಲ್ಲ ಎನ್ನುವ ಮಾತನ್ನು ಹೇಳಿದರು. ಅಲ್ಲಿಯೂ ಇದೆ. ಪ್ರತಿ ಜಿಲ್ಲೆಗಳಲ್ಲಿಯೂ ಜಿಲ್ಲಾವಾರು ಒಂದು ಸಮಿತಿಯನ್ನು ಮಾಡಿದ್ದು, ಅಲ್ಲಿನ ಅಧಿಕಾರಿಗಳು ದತ್ತು ಪಡೆದಂಥ ಮಕ್ಕಳಿಗೆ ಎಲ್ಲ ರೀತಿಯ ಕಾಳಜಿ ವಹಿಸುವಂಥ ಕೆಲಸವನ್ನು ಮಾಡುತ್ತಿದ್ದಾರೆ. ಮಕ್ಕಳಿಗೆ ತಂದೆ–ತಾಯಿಗಳು ಸಿಗುವಂತಾಗಬೇಕು ಎಂದು ಹೇಳಿದರು. ಅದರ ಬಗ್ಗೆ ನಮ್ಮ ಇಲಾಖೆ ಬಹಳಷ್ಟು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದು, ಪ್ರತಿ ಜಿಲ್ಲೆಗೆ 5 ಸದಸ್ಯರನ್ನು ಮಾಡಿದ್ದು, ಒಂದು ಒಳ್ಳೆಯ ಕಾರ್ಯಕ್ರಮವನ್ನು ಮಾಡುತ್ತಿದೆ. ದತ್ತು ಪಡೆದಂಥ ಮಕ್ಕಳಿಗೆ ಯಾವುದೇ ರೀತಿ ತೊಂದರೆಯಾಗದ ರೀತಿಯಲ್ಲಿ ನಮ್ಮ ಇಲಾಖೆ ಕೆಲಸ ಮಾಡುತ್ತಿದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು: Adoption Coordinating Agency ರಾಜ್ಯದಲ್ಲಿ ಬೆಂಗಳೂರು ಬಿಟ್ಟು ಹೊರಗಡೆಯೂ ಇದೆ ಎಂದು ಹೇಳಿದಿರಿ. ಎಲ್ಲಿದೆ ಎನ್ನುವುದನ್ನು ದಯವಿಟ್ಟು ಹೇಳಬೇಕು. ನನಗೆ ಬಂದಿರುವ ಮಾಹಿತಿ ಪ್ರಕಾರ ಬೆಂಗಳೂರಿನಲ್ಲಿ ಒಂದು ಮಾತ್ರ ಇದೆ. ಆದರೆ, ತಾವು ಬೆಂಗಳೂರು ಬಿಟ್ಟು ಹೊರಗಡೆಯೂ ಇದೆ ಎಂದು ಹೇಳುತ್ತಿದ್ದೀರಿ, ಆದ್ದರಿಂದ ಎಲ್ಲಿದೆ ಎನ್ನುವುದನ್ನು ಹೇಳಬೇಕು.

ಶ್ರೀ ಶಿವರಾಜ್ ತಂಗಡಗಿ: Adoption centre ಬೆಂಗಳೂರಿನಲ್ಲಿ ಮಾತ್ರ ಒಂದು ಇದೆ. ಆದರೆ ನಾನು ಹೇಳಿದಂಥಾದ್ದು ಏನೆಂದರೆ, ದತ್ತು ಮಕ್ಕಳನ್ನು ರಕ್ಷಣೆ ಮಾಡತಕ್ಕಂಥ ದೃಷ್ಟಿಯಿಂದ ಒಂದೊಂದು ಜಿಲ್ಲೆಗೆ ಒಂದೊಂದು ಸಮಿತಿಯನ್ನು ಮಾಡಲಾಗಿದೆ. ಈ ರೀತಿ ಸಮಿತಿಯನ್ನು ಮಾಡಿ, ಆ ಮಕ್ಕಳಿಗೆ ರಕ್ಷಣೆ ಕೊಡುವಂಥ ಕೆಲಸವನ್ನು ನಮ್ಮ ಇಲಾಖೆ ಮಾಡುತ್ತಿದೆ.

ಬೀದರ್ ಜಿಲ್ಲೆಯಲ್ಲಿ ಅಂಗನವಾಡಿ ಕೇಂದ್ರಗಳ ನಿರ್ಮಾಣದ ಬಗ್ಗೆ

1215 **ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ** ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಇರುವ ಒಟ್ಟು ಅಂಗನವಾಡಿ ಕೇಂದ್ರಗಳೆಷ್ಟು;